Reg. No. | | | | | | | | | |

**BCMKALN 101**

# I Semester B.Com. Degree Examination, April/May 2022
## (NEP 2020) (2021-22 Batch Onwards)
## KANNADA LANGUAGE (AECC)

Time : 2 Hours  Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸುವುದು : **(3×8=24)**

1) ಕರ್ಣನ ತ್ಯಾಗ, ಮಾತೃ ಭಕ್ತಿ , ಸ್ವಾಮಿ ನಿಷ್ಠೆ ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

**ಅಥವಾ**

ತೆಂಕಣಗಾಳಿಯು ಉಂಟು ಮಾಡಿದ ಅನಾಹುತಗಳು ಕವಿತೆಯಲ್ಲಿ ಹೇಗೆ ಒಡಮೂಡಿದೆ ? ಚಿತ್ರಿಸಿ.

2) ಆಧುನಿಕ ಅಂಡಮಾನ್ ಸಮಾಜದೊಂದಿಗೆ ಜರವಾ ಸಮುದಾಯ ಮುಖಾಮುಖಿಯಾಗುತ್ತಿರುವ ಬಗೆಯನ್ನು ವಿವರಿಸಿ.

**ಅಥವಾ**

ಅಬ್ದುಲ್ ಕಲಾಂ ಅವರ 'ಜ್ಞಾನ – ಸಮಾಜದ ಪರಿಕಲ್ಪನೆ' ಯನ್ನು ನಿರೂಪಿಸಿ.

3) ಏಕಲವ್ಯ ನಾಟಕದಲ್ಲಿ ನಾಗರಿಕ–ಅನಾಗರಿಕ ಜಗತ್ತಿನ ಮೌಲ್ಯಗಳ ಹೋಲಿಕೆ ಹೇಗೆ ನಿರೂಪಿತವಾಗಿದೆ ? ವಿವರಿಸಿ.

**ಅಥವಾ**

ರಾಜಕಾರಣದ ತಂತ್ರಗಾರಿಕೆ ಪ್ರದರ್ಶಿಸುವ ಕೃಷ್ಣನ ಪಾತ್ರವನ್ನು ನಿರೂಪಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

1) ದೇಶಾಭಿಮಾನದ ಸ್ಫೂರ್ತಿ 'ಹೊಸ ಹಾಡು' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

**ಅಥವಾ**

'ಸಾಫ್ಟ್‌ವೇರ್ ಮತ್ತು ಎಮ್ಮೆ' ಕವನದ ಆಶಯವೇನು ?

2) ಸೂರ್ಯನ ಸಂಕಥನವನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ.

**ಅಥವಾ**

ಆನ್‌ಲೈನ್ ಖರೀದಿಯಲ್ಲಿ ಇರಬೇಕಾದ ಎಚ್ಚರಿಕೆಗಳೇನು ?

3) ದ್ರೋಣರು ಏಕಲವ್ಯನಿಂದ ಗುರುಕಾಣಿಕೆಯನ್ನು ಪಡೆಯುವ ಸನ್ನಿವೇಶವನ್ನು ವಿವರಿಸಿರಿ.

**ಅಥವಾ**

ಕಡೆಗಣಿಸಲ್ಪಟ್ಟವರ ಬದುಕಿನ ಪ್ರತೀಕವಾಗಿ ಏಕಲವ್ಯ ಹೇಗೆ ನಿರೂಪಿತನಾಗಿದ್ದಾನೆ ? ವಿವರಿಸಿ.

P.T.O.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ : (1×5=5)

ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ !
ಒಂದಕ್ಕಜುಂವೆ, ಒಂದಕ್ಕಳುಕುವೆ ;
ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ !
ಮುನ್ನಂಜದ ರಾವಣನೇ ವಿಧಿಯಾದ !
ಅಂಜುವೆನಯ್ಯಾ ಕೂಡಲಸಂಗಮದೇವಾ !

**ಅಥವಾ**

ಗಂಗೆಗೆ ಕೈಯೆಡೆಯೆಂದು
ತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡಾ !
ತ್ಕಾಂಗನೆಗೆ ರಾಧೆಗಿತ್ತು ಮ
ನಂಗೊಳೆ ರಾಧೇಯನೆನಿಸಿ ಸೂತಜನಾದೈ

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : (2×4=8)

1) ಯಾಕೆಂದರೆ ಅವಳದು ಅದೇ ಕಥೆಯಲ್ಲವೇ ?
2) ಭಾಷೆ ಕೊಡೆಣ್ಣು ನಾನಲ್ಲ.
3) ಜೋಳಕ್ಕೆ ತಪ್ಪಿಯುಮಿಂ ಬಾಳ್ವುದೆ.
4) ಉಪ್ಪು ತಿಂದ ಮನೆಯ ಕಾಯುದು ಕರ್ತವ್ಯ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (8×1=8)

1) ಪಂಪನ ತಂದೆಯ ಹೆಸರೇನು ?
2) ರಾವಣನ ಹೆಂಡತಿಯ ಹೆಸರೇನು ?
3) 'ನಾವು ಹುಡುಗಿಯರೇ ಹೀಗೆ' ಇದು ಯಾರ ಕೃತಿ ?
4) ಅರವಿಂದ ಮಾಲಗತ್ತಿಯವರ ಆತ್ಮಕಥೆಯ ಹೆಸರೇನು ?
5) ಎ. ಪಿ. ಜೆ. ಅಬ್ದುಲ್ ಕಲಾಂ ಅವರ ತಂದೆಯ ಹೆಸರೇನು ?
6) ರಾಘವೇಂದ್ರರಾವ್ ಯಾವ ಜಿಲ್ಲೆಯವರು ?
7) ಏಕಲವ್ಯನ ತಂದೆ ಯಾರು ?
8) 'ಹೆಬ್ಬೆರಳು' ನಾಟಕದ ಕರ್ತೃ ಯಾರು ?